RNU AIR DHARWAD

JANUARY 21, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಷ್ಟ್ರೀಯ ಮೂಲಸೌಕರ್ಯ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ,** ಕರ್ನಾಟಕ ಮಹತ್ವದ ರಾಜ್ಯವಾಗಿ ಹೊರಹೊಮ್ಮಿದೆ. ಪ್ರಗತಿ–ಪ್ರೊ ಆಕ್ಟಿವ್ ಗವರ್ನನ್ಸ್ ಅಂಡ್ ಟೈಮ್ಲಿ ಇಂಪ್ಲಿಮೆಂಟೇಶನ್, ಕ್ರಿಯಾಶೀಲ ಆಡಳಿತ ಮತ್ತು ಸಕಾಲಿಕ ಅನುಷ್ಠಾನ, ಡಿಜಿಟಲ್ ವೇದಿಕೆ ಮೂಲಕ, ಯೋಜನಾ ಮೇಲ್ವಿಚಾರಣೆ ತಂಡ–ಪಿಎಂಜಿ ಪೋರ್ಟಲ್‌ನಲ್ಲಿ, ಪ್ರಸ್ತುತ 6 ಲಕ್ಷದ 48 ಸಾವಿರದ 436 ಕೋಟಿ ರೂಪಾಯಿಗಳ ಸಂಚಿತ ಹೂಡಿಕೆಯನ್ನು ಒಳಗೊಂಡಿರುವ, ಒಟ್ಟು 187 ಯೋಜನೆಗಳ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದ ಪ್ರಗತಿ ಡಿಜಿಟಲ್ ವೇದಿಕೆ ಮೂಲಕ, ರಾಜ್ಯದಲ್ಲಿ ಒಟ್ಟು 6 ಪ್ರಮುಖ ರೇಲ್ವೆ ಯೋಜನೆಗಳನ್ನು, ಒಟ್ಟು 21 ಸಾವಿರದ 626 ಕೋಟಿ ರೂಪಾಯಿ ಅನುದಾನದೊಂದಿಗೆ ಅನುಷ್ಠಾನಗೊಳಿಸಿ, ಮೇಲ್ವಿಚಾರಣೆ ನಡೆಸಲಾಗುತ್ತಿದೆ.

<><><>

**ರಾಜ್ಯ ಪ್ರವಾಸ ಕೈಗೊಂಡಿರುವ,** ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಅವರನ್ನು ಬೆಂಗಳೂರಿನ ಎಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ, ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ಅವರು ಸ್ವಾಗತಿಸಿ, ಬರಮಾಡಿಕೊಂಡರು. ಪ್ರಸ್ತುತ ತುಮಕೂರು, ಸಿದ್ಧಗಂಗಾ ಮಠದ, ಸಿದ್ದೇಶ್ವರ ವೇದಿಕೆಯಲ್ಲಿ ಆಯೋಜಿತ, ಡಾಕ್ಟರ ಶಿವಕುಮಾರ ಸ್ವಾಮೀಜಿಯವರ, ಏಳನೆ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ, ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದಾರೆ.

<><><>

**ಯುನೆಸ್ಕೋ ವಿಶ್ವ ಪರಂಪರೆ ತಾಣವಾಗಿರುವ** ಪಟ್ಟದಕಲ್ಲು, ಭಾರತದ ಪ್ರಾಚೀನ ಕಲಾ–ವಾಸ್ತುಶಿಲ್ಪದ ಅಮೂಲ್ಯ ನಿಧಿಯಾಗಿದೆ, ಚಾಲುಕ್ಯ ಉತ್ಸವದ ಮೂಲಕ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ದೊರಕಿದೆ ಎಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ ತಿಮ್ಮಾಪುರ ಹೇಳಿದರು. ಪಟ್ಟದಕಲ್ಲಿನಲ್ಲಿ, ಎರಡನೇ ದಿನದ ಚಾಲುಕ್ಯ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಚಾಲುಕ್ಯರ ಶ್ರೀಮಂತ ವಾಸ್ತುಶಿಲ್ಪ, ಕಲೆ, ಸಂಸ್ಕೃತಿ ಹಾಗೂ ಆಡಳಿತ ಪರಂಪರೆಯನ್ನು ಜಾಗೃತಗೊಳಿಸುವ ಉದ್ದೇಶದೊಂದಿಗೆ ಆಯೋಜಿಸಲಾದ ಈ ಉತ್ಸವವು ಇತಿಹಾಸ ಪ್ರೇಮಿಗಳಲ್ಲಿ ವಿಶೇ ’ ಉತ್ಸಾಹ ಮೂಡಿಸಿದೆ ಎಂದರು. ಇಂದು ಐಹೊಳೆಯಲ್ಲಿ ಮೂರನೇ ದಿನದ ಚಾಲುಕ್ಯ ಉತ್ಸವ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ಧಾರವಾಡ, ಮಾವು ಅಭಿವೃದ್ಧಿ ಕೇಂದ್ರದಲ್ಲಿ,** ಕರ್ನಾಟಕದ ಕೃಷಿ, ತೋಟಗಾರಿಕೆ ಉತ್ಪನ್ನಗಳ ವೈಮಾನಿಕ ಸಾಗಾಣಿಕೆ, ಮಾರುಕಟ್ಟೆ ವಿಸ್ತರಣೆ, ವಿಶೇ ’ವಾಗಿ ಮಾವಿನ ಮಾರಾಟ ಹಾಗೂ ರಫ್ತು ಕುರಿತು ವಿವಿಧ ಭಾಗೀದಾರರ ಸಭೆಯನ್ನು ಆಯೋಜಿಸಲಾಯಿತು.

ಗೋವಾದ, ಮೋಪಾ ವಿಮಾನ ನಿಲ್ದಾಣದ ಮೂಲಕ ಮಾವಿನ ರಫ್ತಿನ ಕುರಿತು ಚರ್ಚಿಸಲಾಯಿತು. ಧಾರವಾಡದ ಮಾವು ಬೆಳೆಗಾರರ ಬಳಗ, ಧಾರವಾಡದ ಮಾವು ಅಭಿವೃದ್ಧಿ ಕೇಂದ್ರ ಹಾಗೂ ಜಿ.ಎಮ್.ಆರ್ ವಿಮಾನ ನಿಲ್ದಾಣದ ಏರ್ ಕಾರ್ಗೋ ಸಂಸ್ಥೆ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

<><><>

**ಇಂದು, 12 ನೇ ಶತಮಾನದ** ನಿಜಶರಣ, ಅಂಬಿಗರ ಚೌಡಯ್ಯ ಅವರ ಜಯಂತಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, ಬೆಂಗಳೂರಿನ ನಯನ ರಂಗಮಂದಿರದಲ್ಲಿ ಆಯೋಜಿತ, ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇನ್ನು ಕೆಲವೇ ಕ್ಷಣಗಳಲ್ಲಿ ಚಾಲನೆ ನೀಡಲಿದ್ದಾರೆ.

<><><>

**ಕೇಂದ್ರ ಸರ್ಕಾರ ಜಾರಿಗೊಳಿಸಲು** ಮುಂದಾಗಿರುವ, ಜಿ ರಾಮ್ ಜಿ ಯೋಜನೆಯನ್ನು ಕಾನೂನಾತ್ಮಕವಾಗಿ ಎದುರಿಸಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿದೆ ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹೇಳಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ಹೆಸರಿನಲ್ಲಿದ್ದ ನರೇಗಾ ಯೋಜನೆಗೆ ಹೊಸ ರೂಪ ನೀಡುವ ನೆಪದಲ್ಲಿ ಯೋಜನೆಯ ಹೆಸರನ್ನು ಬದಲಾಯಿಸಲಾಗಿದೆ ಎಂದರು.

<><><>

**ವಿಜಯನಗರ ಜಿಲ್ಲೆ, ಹೂವಿನಹಡಗಲಿ** ತಾಲೂಕು, ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ವಾರ್ಷಿಕ ಕಾರ್ಣಿಕೋತ್ಸವ ಪ್ರಯುಕ್ತ ತುಂಗ–ಭದ್ರಾ ನದಿಗೆ, ಇಂದಿನಿಂದ 30 ರ ವರೆಗೆ ಪ್ರತಿ ದಿನ, 500 ಕ್ಯೂಸೆಕ್ ನಂತೆ ಹಾಗೂ 31 ರಂದು 300 ಕ್ಯೂಸೆಕ್ ಸೇರಿ ಒಟ್ಟು 0 ದಶಾಂಶ 5–0 ಟಿ.ಎಂ.ಸಿ ನೀರನ್ನು ಭದ್ರಾ ಜಲಾಶಯದಿಂದ ಹರಿಸಲಾಗುವುದು ಎಂದು ಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

<><><>

**ಹಾಸನ ಜಿಲ್ಲೆಯ ಅಭಿವೃದ್ಧಿಗೆ** ಅಧಿಕಾರಿಗಳು ಪ್ರಾಮಾಣಿಕತೆ, ಬದ್ಧತೆ, ಜವಾಬ್ದಾರಿಯೊಂದಿಗೆ ಕರ್ತವ್ಯ ನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಡಿ.ಆರ್ ಪಾಟೀಲ್ ಹೇಳಿದರು. ನಗರದ ಸಂತ ಜೋಸೇಫರ ಶಾಲೆಯ ಸಭಾಂಗಣದಲ್ಲಿ, ಜಿಲ್ಲಾ ಪಂಚಾಯಿತಿ ವತಿಯಿಂದ ಆಯೋಜಿಸಲಾಗಿದ್ದ, ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

<><><>

**ಶಿವಮೊಗ್ಗ ಜಿಲ್ಲೆ, ಹೊಸನಗರ** ತಾಲೂಕು, ರಿಪ್ಪನ್ ಪೇಟೆ ಸಮೀಪದ ಹರತಾಳು ಗ್ರಾಮದಲ್ಲಿ, ಅಪರೂಪದ ಗರುಡ ಶಿಲ್ಪ ಹೊಂದಿರುವ ಮಾಸ್ತಿಕಲ್ಲು ಪತ್ತೆಯಾಗಿದೆ. ವಿಜಯನಗರ ಕಾಲಘಟ್ಟಕ್ಕೆ ಸೇರಿದ ಮಾಸ್ತಿಕಲ್ಲು ಶಾಸನ, ಇತಿಹಾಸ ಹಾಗೂ ಪುರಾತತ್ವದ ದೃಷ್ಟಿಯಿಂದ ಮಹತ್ವ ಪಡೆದಿದೆ.

<><><>

**ಮಂಡ್ಯ ಜಿಲ್ಲೆಯಲ್ಲಿ** ದಡಾರ ಹಾಗೂ ರುಬೆಲ್ಲಾ ನಿರ್ಮೂಲನೆಗಾಗಿ ವಿಶೇ ' ಪಾಕ್ಷಿಕ ಅಭಿಯಾನವನ್ನು 19 ರಂದು ಆರಂಭಿಸಲಾಗಿದ್ದು, ಈ ತಿಂಗಳ 31 ವರೆಗೆ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾಕ್ಟರ ಕುಮಾರ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>